ಫಾರೆಸ್ಟ್ ಇಲಾಖಾ.

ನೋ ಟಿ ಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇರ್ಗ್ಲಾಂಡ್ ಪೋರ್ಟರು ಬ್ರದರ್‌ಸರ ಡಿಟೋ	„ 170
1	ಮದ್ರಾಸ್ ಟಕ್ಸ್‌ರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಬೋರ್ಯಾಮ್‌ರವರೆ ಡಿಟೋ	„ 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ, ಅಸಲ್ ಖರೀದಿಯಲ್ಲಿ ಕೇಕಡಾ $12\frac{1}{2}$ ರೂಪಾಯಿ ಸೋಡಿಯಿಂದ ವಿಕ್ಕಯಿ ಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ನ 1894—95ನೇ ಇಸವಿ ವಿ॥ ಅರ್ಜಿ ನಂಬರ್ 344.

ಮೃತಪಟ್ಟ ಶಿವಾಚಾರದ ದೊಡಿಬೆಲೆ ಪುಟ್ಟಮಲ್ಲಶಟ್ಟರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ಶಿವಾಚಾರದ ಪುಟ್ಟಣ್ಣ ಮೈನರ್ ಗಾರ್ಡಿಯರ್ ಮತ್ತು ತಾಯಿ ಮುದ್ದಮ್ಮ, ಮೃತಪಟ್ಟು ಸದರೀ ಪುಟ್ಟಮಲ್ಲಶಟ್ಟರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ವುರಡಗೆರೆ ಸ್ಥಳದ ಪುಟ್ಟಣ್ಣ ಮೈನರ್ ಗಾರ್ಡಿಯರ್ ಮತ್ತು ತಾಯಿ ಮುದ್ದಮ್ಮ, ವುರಡಗೆರೆ ವಾಸಸ್ಥರಾಗಿ ಮೃತಪಟ್ಟ ಪುಟ್ಟಮಲ್ಲಶಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಣ್ಣ ಮೈನರ್ ಗಾರ್ಡಿಯರ್ ಮತ್ತು ತಾಯಿ ಮುದ್ದಮ್ಮನ ಅರ್ಜಿಯನ್ನು ಸ್ನ 1895ನೇ ಇಸವಿ ಜುಲೈ ತಿಂಗಳ ತಾರೀಖು 8ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿವರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಮಲ್ಲಶಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1895ನೇ ಇಸವಿ ಮಾರ್ಚ್ ತಿಂಗಳ 23ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ.

ಬೆಂಗಳೂರು ಡಿಸ್ಟ್ರಿಕ್ಟ್

ಸ್ಥಿರ ಜಪ್ತಿ ಹರಾಜು ಇಸ್ತಿಹಾರು.

ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟು.

ತಾರೀಖು 19ನೇ ಮಾರ್ಚ್ 1895ನೇ ಇಸವಿ.

ಸ್ನ 1885ನೇ ಇಸವಿ ಅಸಲ್ ನಂಬರ್ 550.

1894—95ನೇ ಇಸವಿ ಜಾರಿ ನಂಬರ್ 1030.

ವಾದಿ ಬೆಂಗಳೂರು ಚಿಕ್ಕಪ್ಯಾಟೆಯಲ್ಲಿರುವ ಕಟ್ಟೂರು ವೆಂಕಟಾಚಾರ್ರು.

ಪ್ರತಿವಾದಿ ಬೆಂಗಳೂರು ಲಾಲ್‌ಬಾಗು ಬಳಿಯಿದ್ದ ಮೇಸ್ತ್ರಿ ರಾಮಂಣ ಘಾತಿ ಸಬಬು ಇವನ ಖಾಸ ಮಗ ವೆಂಕಟಪ್ಪಾಮಿ.

ಈ ವಾದಿಗೆ ಪ್ರತಿವಾದಿಯಿಂದ ಬರಬೇಕಾದ ಡಿಕರಿ ಮೊಬಲಗು ವಗೈರೇ 8806—12—10 ರೂಪಾಯಿಗಳಿಗಾಗಿ ಈ ಕೆಳಗೆ ವಿವರಿಸಲ್ಪಟ್ಟ ಭಾಗಾಯಿತು ತೋಟ ಯಿದರ ಬೀಜವರಿ ಯಕರೆ 3—8 ಯಿದರ ಆಕಾರ 23—8—0 ಈ ತೋಟದಲ್ಲಿರತಕ್ಕ ಮನೆ 1 ಸಹ ಸೇರಿ ಮೇಲ್ಕಂಡ ಮೊಬಲಗ್ಯೆ ಸ್ನ 1895ನೇ ಇಸವಿ ಏಪ್ರಿಲ್ 4ನೇ ತಾರೀಖಿನ ದಿವಿ ಬೆಳಿಗ್ಯೆ 11 ಘಂಟೆ ಲಾಗಾಯಿತು ಸಾಯಿಂಕಾಲ 5 ಘಂಟೆವರಿವಿಗೂ ಹರಾಜು ಮಾಡಲ್ಪಡುತ್ತೆ. ಮಿಕ್ಕಾದ ಸಂಗತಿಗಳು ಕೋರ್ಟಿಗೆ ಬಂದು ತಿಳದುಕೊಳ್ಳತಕ್ಕದ್ದು.

ಬೆಂಗಳೂರು ದೊಡ್ಡ ಜೈಲುಖಾನೆ ಬಳಿಯಿರುವ ಸರ್ವೆ ನಂಬರು 64—65—68.

ಕೋರ್ಟು ಮೊಹರು ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಪಿಟ್. ವಿ. ನಂಜುಂಡಯ್ಯ, ಸಬ್ ಜಡ್ಜ್.